head and moreover, all the District Hospitals, PUC, PHCs, PHU are starving without medicines.

As per the Government of Karnataka brochur, the expenditure on maintenance has been shown as Rs. 6380 lakhs during 1985-86 and the expenditure on Officers was shown as Rs. 3180 lakhs. What is the ratio between maintenance and the medical care on Public Health It is because of less budget provided for medicines & Public Health, people are suffering. Will the Hon'ble Minister explain the reasons for spending Crores of rupees on Officers by neglecting Public Health?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ವಾಹನಗಳ ಮೇಲೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು ಬೇರೆ ಬೇರೆ ಬಾಬುಗಳ ಮೇಲೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ವಾಹನಗಳ ಮೇಲೆ ಬಹಳ ಕಡಿಮೆ ಹಣ ಖರ್ಚು ಮಾಡಿದ್ದೇವೆ. ವಾಹನಗಳನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಮೆಂಟೇನೆನ್ಸ್‌ಗೆ ೩೧.೫೦ ಲಕ್ಷ ಖರ್ಚು ಮಾಡಿದ್ದೇವೆ. ಸಿಬ್ಬಂದಿಗೆ ಮತ್ತು ಮೆಕ್ಯಾನಿಕ್ ಈ ಬಾಬುಗಳಿಗೆ ಖರ್ಚು ಮಾಡಿರತಕ್ಕಂಥಾದ್ದು ಬಹಳ ಕಡಿಮೆ, ಅದನ್ನೂ ಸಹ ತೋರಿಸಿದ್ದೇನೆ. ಇನ್ನು ಔಷಧಿ ಬಗ್ಗೆ ಹೇಳುವುದಾದರೆ ೩ ವರ್ಷದಿಂದ, ಈಚೆಗೆ ಈ ಔಷಧಿಗಳಿಗೆ ಏನು ಕೊಡುತ್ತಿದ್ದರೋ ಅದರ ಎರಡು ಮೂರು ಪಟ್ಟು ಈಗ ನಾವು ಜಾಸ್ತಿ ಕೊಡುತ್ತಾ ಇದ್ದೇವೆ. ಇದಂತೆ ರೆಗೆ ಯಾವ ಆಸ್ಪತ್ರೆಗಳಲ್ಲೂ ಕೂಡ ಕಡಿಮೆ ಔಷಧಿ ಬಂದಿದೆ ಎನ್ನುವ ದೂರು ಬಂದಿಲ್ಲ.

SRI MOHAMMED LAIKUDDIN.—The Hon'ble Minister has stated that on vehicles only Rs. 529 lakhs has been spent. It may be for the purchase of vehicles. Regarding maintenaces, lot of amount has been spent. So, more expenditure was incurred on the repairs of vehicles than for treating human life. The expenditure on maintenance of vehicles or the purchase of vehicles may kindly be reduced and also the expenditure on Officers should be reduced. I also request that on the medical care, more money should be spent and the budget provision should be enhanced. I want a reply from the Hon'ble Minister in this regard.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈಗ ವಾಹನಗಳು ಇಲ್ಲದೇ ಗ್ರಾಮಾಂತರ ಪ್ರದೇಶಗಳಿಗೆ ವೈದ್ಯಕೀಯ ಸೌಲಭ್ಯಗಳನು ಕೊಡುವುದು ಕಷ್ಟ. ತಮಗೆ ಗೊತ್ತಿರುವ ಹಾಗೆ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಲ್ಲಾ ಕಾರ್ಯ ಚಟುವಟಿಕೆಗಳೂ ನಡೆಯಬೇಕಾದರೆ ಗ್ರಾಮಾಂತರ ಪ್ರದೇಶಗಳಿಗೆ ವಾಹನಗಳ ಸೌಕರ್ಯ ಬೇಕಾಗುತ್ತದೆ. ಆದುದರಿಂದ ಅಲ್ಲಿಗೆ ಎಷ್ಟು ವಾಹನಗಳು ಅಗತ್ಯವೋ ಅಷ್ಟು ಮಾತ್ರ ಕೊಂಡುಕೊಂಡಿದ್ದೇವೆ. ಕಡಿಮೆ ಖರ್ಚಿನಲ್ಲಿ ಆ ಬಾಬುಗಳಿಗೆ ಹಣವನ್ನು ಒದಗಿಸುತ್ತಿದೇವೇ ವಿನಾ ಬಹಳ ದುಬಾರಿಯಾಗಿ ಖರ್ಚು ಮಾಡುತ್ತಾ ಇಲ್ಲ.

ಕೇಂದ್ರ ಕಾನೂನು ಸಚಿವರು ಮಾಡಿರುವ ಆಪಾದನೆಗಳು

ಳಿಟ್ಟೂ. ಶ್ರೀ ಜಿ.ಎಸ್. ಹೆಗಡೆ ಅಜ್ಜಿಬಾಳ್ (ಅಂಕೋಲಾ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ಸ್ಥಾನಕ್ಕೆ ರಾಜ್ಯ ಸರ್ಕಾರವು ಸಚಿವರುಗಳಿಗೆ ಸಂಬಂಧಪಟ್ಟವರುಗಳನ್ನು ನೇಮಿಸಲು ಶಿಫಾರಸ್ಸು ಮಾಡಿದೆಯೆಂದು ಕೇಂದ್ರ ಸಹಾಯಕ ಕಾನೂನು ಸಚಿವರಾದ ಶ್ರೀ ಭಾರದ್ವಾಜ್‌ರವರು ಮಾಡಿರುವ ಆಪಾದನೆಯು ನಿಜವೇ?

ಬಿ) ರಾಜ್ಯ ಸರ್ಕಾರವು ಸದರಿ ಸಚಿವರು ಮಾಡಿರುವ ಆಪಾದನೆ ಬಗೆಗೆ ತನ್ನ ಪ್ರತಿಭಟನೆಯನ್ನು ವ್ಯಕ್ತ ಪಡಿಸಿದೆಯೇ, ಇಲ್ಲವಾದರೆ, ಈ ಬಗ್ಗೆ ರಾಜ್ಯ ಸರ್ಕಾರವು ಏನು ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು)

ಎ) ಆಪಾದನೆಗಳು ನಿಜವಲ್ಲ.

ಬಿ) ಮುಖ್ಯ ಮಂತ್ರಿಯವರು ಆಪಾದನೆಗಳು ನಿಜವಲ್ಲ ಎಂದು ಪ್ರತಿಭಟಿಸಿ ಪ್ರಧಾನ ಮಂತ್ರಿಯವರಿಗೆ ಈಗಾಗಲೇ ಪತ್ರ ಬರೆದಿದ್ದಾರೆ.

MR. SPEAKER.— Q. No. 469, Sri Ajjibal Hegde to ask the question.

SRI M. VEERAPPA MOILY.— I rise to a point of order,

MR. SPEAKER.—ಏನು ಪ್ರಶ್ನೆ ಮೇಲೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಹೌದು.

ಅಧ್ಯಕ್ಷರು.—ಹಾಗಾದರೆ ಈ ಪ್ರಶ್ನೆ ಮೇಲೆ ತಾವು ಅರ್ಧ ಗಂಟೆ ಡಿಸ್ಕಷನ್ ಮಾಡುವುದಕ್ಕೆ ನೋಟೀಸ್ ಕೊಡಿ.

ಶ್ರೀ ಎಂ.ವೀರಪ್ಪ ಮೊಯಿಲಿ.—ಇದು ಅರ್ಧಗಂಟೆ ಡಿಸ್ಕಷನ್‌ಗೆ ಸಂಬಂಧಪಟ್ಟದ್ದಲ್ಲ. ಸರ್ಕಾರಕ್ಕೆ ಸಂಬಂಧಪಟ್ಟದ್ದುದು.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರ ಹೇಗೆ ಉತ್ತರ ಕೊಡಬೇಕು, ಏನು ಉತ್ತರ ಕೊಡಬೇಕು ಅದಕ್ಕೆ ಸಂಬಂಧಪಟ್ಟ ಪ್ರಶ್ನೆ ಇದಲ್ಲ. ಇದು ಮೂಲ ಭೂತವಾದ ಪ್ರಶ್ನೆ ಈ ಪ್ರಶ್ನೆಯನ್ನು ಈಗ ಇದರಲ್ಲಿ ಎತ್ತುವುದಕ್ಕೆ ಸಾಧ್ಯ ಇದೆಯೇ ಅಥವಾ ಈ ಸದನದ ರೂಲ್ಸ್ ಪ್ರಕಾರ ನಿಯಮದ ಪ್ರಕಾರ ಈ ಸದನ ಏನ್ನು ನಿಯಮವನ್ನು ಪಾಲಿಸಬೇಕು ಆ ನಿಯಮದ ಪ್ರಕಾರವೇ ಇದನ್ನು ಎತ್ತಲಿಕ್ಕೆ ಸಾಧ್ಯ ಇದೆಯೇ? ಈವಿಷಯವನ್ನು ಈಗ ಇಲ್ಲಿ ಎತ್ತಲಿಕ್ಕೆ ಸಾಧ್ಯ ಇದೆ ಎಂದರೆ ಅದು ತಮಗೆ ಬಿಟ್ಟ ಪ್ರಶ್ನೆ. ನಾನು ಆ ಪ್ರಶ್ನೆಗೆ ಹೋಗುವುದಿಲ್ಲ. ಈ ಸದನದ ರೂಲ್ಸ್ ಆಫ್ ಪ್ರೊಸೀಜರ್ ನಲ್ಲಿ ರೂಲ್ ೪೬ ರಲ್ಲಿ ಏನು ಇದೆ ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

Rule 46(1) says thus.

> " Subject to the provisions of Sub-rule (2) a question may be asked for the purpose of obtaining information on a matter of public importance within the special cognisance of the Minister to whom it is addressed. "

ಈಗ ತಾವು ಅವರ ಪೋರ್ಟ್ ಫೋಲಿಯೋವನ್ನು ತರೆಸಿ ನೋಡಿ. ಇದು ಹೈಕೋರ್ಟಿಗೆ ಸಂಬಂಧಪಟ್ಟ ವಿಚಾರ. ಈ ವಿಷಯ ಮುಖ್ಯಮಂತ್ರಿಗಳಿಗೆ ಸೇರಿದ್ದುದು. ಕಾನೂನು ಮಂತ್ರಿಗಳಿಗೆ ಸೇರಿದ್ದಲ್ಲ. ಅವರ ಪೋರ್ಟ್‌ಫೋಲಿಯೋ ಲಿಸ್ಟನ್ನು ತರಿಸಿ ಇದು ಹೈಕೋರ್ಟಿಗೆ ಸಂಬಂಧಪಟ್ಟ್ರಂತೆ ಬರುತ್ತದೆ. ಮುಖ್ಯಮಂತ್ರಿಗಳ ಪರವಾಗಿ ಅವರು ಉತ್ತರ ಕೊಡುವುದು ಅದು ಪ್ರತ್ಯೇಕ. ಆದರೆ ಇದು ಸಂಪದೀಯ ಸಚಿವರಿಗೆ ಸೇರಿದ್ದಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಅವರು ಉತ್ತರ ಕೊಡುವುದಕ್ಕೆ ನಾನು ಆಕ್ಷೇಪಣೆಗೆ ಬರುವುದಿಲ್ಲ. It is listed against the name of the Law Minister. That is the basic question. This pertains to the portfolio of the Hon'ble Chief Minister because it pertains to the

High Court. It is listed against the name of the Law Minister and it cannot be asked at all now. It is highly irregular.

SRI A. LAKSHMISAGAR.—That is a Printing Mistake.

ಶ್ರೀ ಎಂ. ವೀರಪ್ಪಮೊಯಿಲಿ.— ನೀವೇ ಇದನ್ನು ಪ್ರಿಂಟಿಂಗ್ ಮಿಸ್ಟೇಕ್ ಎಂದರೆ ಆದು ಆಗುವುದಿಲ್ಲ. ಇದು ಹೈಕೋರ್ಟಿಗೆ ಹೋಗುವ ವಿಚಾರ. ಪ್ರಿಂಟಿಂಗ್ ಮಿಸ್ಟೇಕ್ಸ್ ಈ ರೀತಿ ಆಗಿಬಿಟ್ಟರೆ ಏನಾಗುತ್ತದೆ. ಎಂದು ನಾನು ಹೇಳುವುದಿಲ್ಲ. ಮತ್ತೆ ಇದರಲ್ಲಿ ರೂಲು ೪೬ (೨) (೧) ರಲ್ಲಿ ಏನು ಇದೆ ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

Rule 46 (2) (1) says. "It shall not make or imply a charge of a personal character." ಎಂದು ಇದೆ. ಇದು ಒಬ್ಬ ಮಂತ್ರಿಗೆ ಸಂಬಂಧಪಟ್ಟ ವಿಚಾರ. ಇದು ಕೇಂದ್ರದ ಮಂತ್ರಿಯವರಿಗೆಸಂಬಂಧ ಪಟ್ಟ ವಿಚಾರ, ಅವರು ಈ ಮನೆಯ ಸದಸ್ಯರಲ್ಲ. ಈಬಗ್ಗೆ ಇನ್ನೊಂದು ರೂಲು ಇದೆ. ಅದನ್ನೂ ಸಹ ತಮ್ಮ ಗಮನಕ್ಕೆ ತರುತ್ತೇನೆ.

On many counts, it is highly irregular, and it cannot be asked now. Rule 46 (2) (m) says.

> "It shall not raise questions of policy too large to be dealt with within the limits of an answer to a question;"

It is a question of appointment of judges. Appointment of judges of the High Court is such a large question which has got to be dealt with properly, recommendations to be made by the Governor, Hon'ble Chief Minister Hon'ble Chief Justice of the Karnataka High Court and Government of India and ultimately the appointments will have to be made by the Chief Justice of India. Such a large question does not come within the reach or the limits of the Law Minister. Forget about the Minister of this House. Can such type of question be asked is the question ?

There are several questions.

> "It shall not raise matters under the control or bodies or persons not primarily responsible to the State Government."

Sir, appointing authority ಯಾರು ಅಧ್ಯಕ್ಷರೇ ?

It is the Chief Justice of India, not even the Government of India, not even the State Governament, not even the High Court of Karnataka. Sir, whether such a question could be raised on the floor of this House ? I will read next para.

> "It shall not ask for information regrading Cabinet discussions, or advice given to the Governor in relation to any matter in respect of which there is a Constitutional, statutory or conventional obligation not to disclose the information"

ಈ ಪ್ರಶ್ನೆ ಕೇಳಿದರೆ ನಾಳೆ ಕ್ಯಾಬಿನೆಟ್‌ನಲ್ಲಿ ಏನೇನಾಗುತ್ತದೆ ಅದನ್ನೆಲ್ಲಾ ಕೇಳಬೇಕಾಗುತ್ತದೆ, ಮಾನ್ಯ ಗವರ್ನರ್ ಹತ್ತಿರ ಹೋಗಿ ಏನು ಮಾಡುತ್ತಾರೆ, ಏನು ಅಡ್ವೈಸ್ ಮಾಡುತ್ತಾರೆ ಅದನ್ನು ನಾವು ಕೇಳುತ್ತೇವೆ, ಕೇಂದ್ರಕ್ಕೆ ಏನು ಬರೆಯುತ್ತಾರೆ, ಆ ಇನ್‌ಫರ್ಮೇಷನ್ ಕೇಳಬೇಕಾಗುತ್ತದೆ. All that will have to be laid on the table of the House. It may lead ultimately even to that. Then how do you keep the secrecy as to what transpired between the Chief Justice and the Hon'ble Chief Minister or as between the Governor and the Hon'ble Chief Ministe or as between the Chief Justice of India and the Hon"ble Chief Minister, or the High Court Chief Justice, cannot be asked at all, ಆಮೇಲೆ That person is not before us. ಆದಂದರಿಂದ ಇಂತಹ ಪ್ರಶ್ನೆ ಇಲ್ಲಿ ಬರಲೇ ಬಾರದು ಅಧ್ಯಕ್ಷರೆ, ಇದಕ್ಕೆ ಅಟೆಂಪ್ಟ್ ಕೂಡ ಮಾಡಲೇ ಬಾರದು ಇಂಥಾದ್ದನ್ನು ಈಗ ಅಟೆಂಪ್ಟ್ ಮಾಡಬಾರದು. ಈ ವಿಚಾರವನ್ನು ಸಾರ್ವಜನಿಕರ ಗಮನಕ್ಕೆ ತರಬೇಕಾಗುತ್ತದೆ. ಸರ್ಕಾರ ಇನ್ನು ಮುಂದೆ ಇಂತಹ ಉತ್ತರ ಕೊಡತಕ್ಕ ಸಾಹಸ ಮಾಡಬಾರದು. ಇದನ್ನು ಸದುದ್ದೇಶದಿಂದ ಮಾಡಿದ್ದರೆ I welcome it. You can give a ruling so that ruling will become a milestone in upholding certain conventions which have got to be maintained. ಆದುದರಿಂದ ಇದರ ಬಗ್ಗೆ ಪ್ರಶ್ನೆ ಎತ್ತಲಿಕ್ಕೆ ಆಗುವುದಿಲ್ಲ. It is highly irregular. it is highly illegal. It is contrary to all the rules and conventions. This House has absolutely no jurisdiction to discuss a question of this nature. ಆದುದರಿಂದ ಇದನ್ನು ಎತ್ತಲಿಕ್ಕೆ ಆಗುವುದಿಲ್ಲ. ಇದಕ್ಕೆ ಅವಕಾಶ ಮಾಡಿಕೊಟ್ಟರೆ, ನಾಳೆ ಇಡೀ ರಾಷ್ಟ್ರದಲ್ಲಿ ವಿಧಾನಸಭೆಯೆಂ ಸೌಲತ್ತು, ಹಕ್ಕನ್ನು ಸಂಪೂರ್ಣವಾಗಿ ಮೊಟಕುಗೊಳಿಸತಕ್ಕಂಥ ಮತ್ತು ಸಂಪೂರ್ಣವಾಗಿ ದುರುಪಯೋಗ ಮಾಡತಕ್ಕಂಥ ಒಂದು ಪ್ರವೃತ್ತಿಯನ್ನು ಬೆಳೆಸತಕ್ಕ ಕೆಲಸ ಆಗುತ್ತದೆ ಎಂದು ತಮ್ಮಲ್ಲಿ ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ಪ್ರಶ್ನೆವೇಳೆ ಏನಿದೆ ಆ ಕಾಲ ಸದಸ್ಯರಿಗೆ ಸಂಬಂಧ ಪಟ್ಟಿದ್ದುದು, ಸರ್ಕಾರಕ್ಕೆ ಅಲ್ಲ. ಈ ಕಾಲದಲ್ಲಿ ಯಾವುದೇ ವಿಧಿಬಿಂದು ಎತ್ತುವುದಕ್ಕೆ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಅವಕಾಶ ಇಲ್ಲ, ಆದರೂ ತಾವು ಅದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಪ್ರಶ್ನೆಗಳನ್ನು ಅಡ್ಮಿಟ್ ಮಾಡುವುದು, ಬಿಡುವುದು ಸರ್ಕಾರಕ್ಕೆ ಸಂಬಂಧವಿಲ್ಲ. ಮಾನ್ಯ ವೀರಪ್ಪಮೊಯಿಲಿಯವರು ಮತ್ತು ನಾನೂ ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇವೆ ತಾವು ಆಡಿಟ್ ಮಾಡಿದಮೇಲೆ ಮಂತ್ರಿಗಳು ಉತ್ತರ ಕೊಡುವುದು ಅದರ ಕರ್ತವ್ಯವಾಗಿರುತ್ತದೆ. ಯಾವಾಗ ತಮ್ಮ ಕಛೇರಿಯಿಂದ ಪರವಾನಗಿ ಬರುತ್ತದೆ. ಬಂದಮೇಲೆ ಮಂತ್ರಿಗಳು ಲಿಖಿತ ಮೂಲಕ ಉತ್ತರವನ್ನು ಕಳಿಸಬೇಕಾಗಿರುವು ಅವರ ಕರ್ತವ್ಯ. ಆದುದರಿಂದ ಇದರಲ್ಲಿ ಸರ್ಕಾರದ ಯಾವುದೇ ವಿಧವಾದ ಲೋಪ ಇಲ್ಲ. ಎಲ್ಲಿಯೂ ಸರ್ಕಾರದ ನೇರವಾದ ಪ್ರವೇಶ ಇಲ್ಲವೇ ಇಲ್ಲ. ವಿರೋಧ ಎಂದರೆ ತಮಗೆ ಎಂದರೆ ಲೆಜಿಸ್ಲೇಚರ್‌ಗೆ ಸಂಬಂಧ ಪಟ್ಟಂಥ ಪ್ರಶ್ನೆ ಇದ್ದರೆ ತಮ್ಮ ಜೊತೆಯಲ್ಲಿ ಚರ್ಚೆ ಮಾಡಿದಮೇಲೆ ತಾವು ಏನು ಆದೇಶ ಕೊಡುತ್ತೀರೋ ಅಂದರೆ ಆ ಪ್ರಶ್ನೆಯನ್ನು ವಿತ್‌ಹೋಲ್ಡ್ ಮಾಡುವ ಅಧಿಕಾರ ತಮಗೆ ಇದೆ. ಆದರೆ ಇಲ್ಲಿ ಅಜೆಂಡಾದಲ್ಲಿ ಬಂದಮೇಲೆ ಪ್ರಶ್ನೆಯನ್ನು ಕೇಳುವ ಹಕ್ಕು ಆ ಸದಸ್ಯರಿಗೆ ಇದೆ ಅದನ್ನು ವಿತ್‌ಹೋಲ್ಡ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಅಧಿಕಾರ ಇರುವುದು ತಮಗೊಬ್ಬರಿಗೇ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಪ್ರಶ್ನೆಯನ್ನು ಕೇಳುವ ಹಕ್ಕು ಸದಸ್ಯರಿಗೆ ಇದೆ, ಆ ಕಡೆಯ ಸದಸ್ಯರಾಗಲಿ, ಈ ಕಡೆಯ ಸದಸ್ಯರಾಗಲಿ, ಅವರಿಗೆ ಇದೆ ಪ್ರಶ್ನೆಗಳ ಕಾಲ ಸದಸ್ಯರಿಗೆ ಸಂಬಂಧಪಟ್ಟಿದ್ದುದು. ಸರ್ಕಾರಕ್ಕೆ ಸಂಬಂಧ ಇಲ್ಲವೇ ಇಲ್ಲ.

(ಗೊಂದಲ)

ಅಧ್ಯಕ್ಷರು.— ತಾವೆಲ್ಲಾ ಕುಳಿತುಕೊಳ್ಳಿ, ಅವರು ಏನು ಹೇಳುತ್ತಾರೋ ಅದನ್ನು ಸ್ವಲ್ಪ ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.— ಇಲ್ಲಿ ಪಾಠ ಹೇಳಿದರೆ ಆಗುವುದಿಲ್ಲ.

ಅಧ್ಯಕ್ಷರು.— ಈ ರೀತಿ ಎಲ್ಲರೂ ಎದ್ದು ಮಾತನಾಡಿದರೆ ಏನೂ ಆಗುವುದಿಲ್ಲ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೋ ಹೇಳಲಿ.

(ಗೊಂದಲ)

ಅಧ್ಯಕ್ಷರು.— ಮಾನ್ಯ ವೀರಪ್ಪಮೊಯ್ಲಿಯವರು ಹೇಳಿದ್ದಾರೆ, ಅವರು ಹೇಳಿದ್ದನ್ನು ಕೇಳಿದ್ದೇವೆ, ಈಗ ಇವರು ಹೇಳುವುದನ್ನು ಕೇಳಬೇಕು.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ.

ಶ್ರೀ ಗೋಪಾಲ ಮುಕುಂದ ಕಾನಡೆ. — ಹಾಗಾದರೆ ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.— ಅವಕಾಶ ಕೊಡುವುದು ನನಗೆ ಬಿಟ್ಟಿದ್ದುದು. ಮಾನ್ಯ ವೀರಪ್ಪಮೊಯ್ಲಿಯವರು ಹೇಳಿದರು, ಅವರೂ ಅನುಭವಸ್ಥರು ಇವರೂ ಅನುಭವಸ್ಥರು. ಈಗ ರಘುಪತಿಯವರು ಹೇಳಲಿ.

(ಗೊಂದಲ)

ಅಧ್ಯಕ್ಷರು.— ನಾನು ಅವರಿಗೆ ಅಲೋ ಮಾಡಿದ್ದೇನೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.— ಈ ರೀತಿ ಪದ್ಧತಿ ಸರಿಯಲ್ಲ. ನಾನು ಅವರನ್ನು ಕರೆದಿದ್ದೇನೆ, ಅವರು ಮಾತನಾಡುವುದಕ್ಕೆ ಪರ್ಮಿಟ್ ಮಾಡಿದ್ದೇನೆ, ಆಮೇಲೆ ಮಂತ್ರಿಗಳು ಹೇಳಲಿ, ಆಮೇಲೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ಸದನದಲ್ಲಿ...

(ಗೊಂದಲ)

ಅಧ್ಯಕ್ಷರು.— ಇವರನ್ನಾದರೂ ಕರೆಯುತ್ತೇನೆ, ಅವರನ್ನಾದರೂ ಕರೆಯುತ್ತೇನೆ. ಅವರಿಗೆ ಮಾತನಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದೇನೆ. ಆಮೇಲೆ ಮಂತ್ರಿಗಳು ಹೇಳಲಿ, ಆಮೇಲೆ ರೂಲಿಂಗ್ ಕೊಡುತ್ತೇನೆ. ತಾವು ಕುಳಿತುಕೊಳ್ಳಿ ಸ್ವಾಮಿ. ಈಗ ರಘುಪತಿಯವರು ಹೇಳಲಿ.

(ಗೊಂದಲ)

ಶ್ರೀ ಬಿ.ಎ. ಉಮರಬ್ಬ.— ನಮಗೂ ಅವಕಾಶ ಕೊಡಿ.

ಅಧ್ಯಕ್ಷರು.— ಅವಕಾಶ ಕೊಡುವುದು ಬಿಡುವುದು ನನಗೆ ಬಿಟ್ಟದ್ದುದು.

ಶ್ರೀ ಪಂಪಾಪತಿ.—ಅವರು ಏನು ಮಾತನಾಡುತ್ತಾರೋ ಅದಕ್ಕೆ ಅವಕಾಶ ಕೊಡುವುದು ನ್ಯಾಯ.

ಶ್ರೀ ಎಂ. ರಘುಪತಿ.— ಪ್ರಶ್ನೆ ಕಾಲ ಎನ್ನುವುದು ಸದಸ್ಯರಿಗೆ ಸಂಬಂಧಪಟ್ಟಿದ್ದುದು.

ಶ್ರೀ ಬಿ. ಸ್ವಾಮಿರಾವ್.— ಅವರು ಹೇಳಿದ್ದನ್ನೆಲ್ಲಾ ಇಲ್ಲಿ ಕೇಳಬೇಕೇ?

ಅಧ್ಯಕ್ಷರು.— ಮತ್ತೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು ಎನ್ನುವುದು ತಮ್ಮ ಉದ್ದೇಶವೇ.

(ಗೊಂದಲ)

ಶ್ರೀ ಪಂಪಾಪತಿ.— ಮಾನ್ಯ ರಘುಪತಿಯವರಿಗೆ ಅವಕಾಶ ಕೊಟ್ಟಿದ್ದೀರಿ, ಅವರು ಮಾತನಾಡಬೇಕು.

ಶ್ರೀ ಎಂ. ರಘುಪತಿ.— ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಇಷ್ಟೇ ನಾನು ಪ್ರಾರ್ಥನೆ ಮಾಡಿಕೊಳ್ಳುವುದು. ಪ್ರಶ್ನೆಗಳ ಕಾಲ ಎಂದರೆ ಅದು ಸದಸ್ಯರಿಗೆ ಸಂಬಂಧವಪಟ್ಟಿದ್ದುದು. ಈ ಕಡೆ

ಸದಸ್ಯರಾಗಲಿ, ಆ ಕಡೆ ಸದಸ್ಯರಾಗಲಿ, ಸದಸ್ಯರಿಗೆ ಸಂಬಂಧಪಟ್ಟಿದ್ದುದು. ಸದಸ್ಯರು ತಮ್ಮ ಪರವಾನಗಿ ಪಡೆದು ಮಾತನಾಡುವುದಕ್ಕೆ ಅವಕಾಶವಿದೆ. ಈ ಸಂದರ್ಭದಲ್ಲಿ ಪ್ರಶ್ನೆಯನ್ನು ಹಾಕಿದಂಥ ಸದಸ್ಯರು ಗೈರು ಹಾಜರಾದರೆ ಆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ. ಎರಡನೆಯದು, ವಿತ್‌ಡ್ರಾ ಮಾಡುವುದು. ಲಿಖಿತ ಮೂಲಕ ಕೊಟ್ಟರೆ ತಾವು ಅದನ್ನು ವಿತ್‌ಡ್ರಾ ಮಾಡಬಹುದು. ಇಲ್ಲ, ತಮಗೇ ವಿತ್‌ಹೋಲ್ಡ್ ಮಾಡುವುದಕ್ಕೆ ಅವಕಾಶವಿದೆ. ಈ ಅವಕಾಶವನ್ನು ಬಿಟ್ಟು ಇದರಲ್ಲಿ ಸರ್ಕಾರದ ಜವಾಬ್ದಾರಿ ಏನೂ ಇಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ವೀರಪ್ಪ ಮೋಯಿಲಿಯವರಿಗೂ ಅವಕಾಶ ಕೊಟ್ಟಿದ್ದೇನೆ. ಅವರು ಹೇಳಿದ್ದಾರೆ. ಇದು ಪದ್ಧತಿ ಅಲ್ಲ. ಅವರು ಲೀಡರ್ ಆಗಿದ್ದವರು, ಅನುಭವಸ್ಥರಿದ್ದಾರೆ, ಮಾಜಿ ಮಂತ್ರಿಗಳಾಗಿದ್ದವರು. ಅನುಭವಸ್ಥರೆಂದು ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಆಮೇಲೆ ಸಂಸದೀಯ ವ್ಯವಹಾರ ಮಂತ್ರಿಗಳೆ, ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನು ಕೇಳುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರಿಗೆ ಹೇಗೆ ಅವಕಾಶ ಕೊಟ್ಟಿದ್ದೇನೆಯೋ ಹಾಗೇ ಇವರಿಗೂ ಅವಕಾಶವನ್ನು ಕೊಟ್ಟಿದ್ದೇನೆ, ಅವರು ವೀರಪ್ಪಮೊಯಿಲಿಯವರಿಗೆ ಹೇಗೆ ಅವಕಾಶ ಕೊಟ್ಟಿರೆಂದು ಕೇಳಬಹುದಿತ್ತು.

ಶ್ರೀ ಎಂ ರಘುಪತಿ.—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಈ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡದಿದ್ದರೆ ಸದಸ್ಯರ ಹಕ್ಕನ್ನು ಮೊಟಕು ಮಾಡಿದ ಹಾಗೆ ಆಗುತ್ತದೆ. ಇದನ್ನು ಆಡ್ಮಿಟ್ ಮಾಡುವ ಸ್ಟೇಜ್‌ನಲ್ಲಿ ರಿಜೆಕ್ಟ್ ಮಾಡುವ ಅಧಿಕಾರ ತಮಗೆ ಇದೆಯೇ ಹೊರತು, ಬೇರೆ ಯಾರಿಗೂ ಅಧಿಕಾರವಿಲ್ಲ. ಆ ಅಧಿಕಾರವನ್ನು ತಾವು ಚಲಾಯಿಸಿದ್ದೀರಿ. ತಮ್ಮ ಅಧಿಕಾರವನ್ನು ಚಲಾಯಿಸಿ ಈ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ದಯವಿಟ್ಟು ಆಜ್ಜಿಬಾಳ್ ಹೆಗಡೆ ಅವರು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ನನ್ನ ವಾದ ಇಷ್ಟೇ ಸದಸ್ಯರಿಗೆ ಎಷ್ಟು ಹಕ್ಕು ಇದೆಯೋ ಅದನ್ನು ಕಾಪಾಡುವ ಕರ್ತವ್ಯ ತಮ್ಮದು, ಸದಸ್ಯರ ಹಕ್ಕನ್ನು ತಾವು ಕಾಪಾಡುತ್ತೀರೆಂದು ಸಂಸದೀಯ ವ್ಯವಹಾರಗಳಲ್ಲಿ ತಮ್ಮ ಸ್ಥಾನ ಏನಿದೆ, ಅದರ ಗೌರವವನ್ನು ಎತ್ತಿ ಹಿಡಿದಿದ್ದೀರಿ ಎನ್ನುವ ಸಂಪೂರ್ಣ ನಂಬಿಕೆ ಇದೆ. ಆಕ್ಷೇಪವಿದ್ದರೆ, ಈ ಆಕ್ಷೇಪವಾಗಿರುವ ಅಂಶಗಳನ್ನು ಕೇಳಬಾರದೆಂದು ಹೇಳುವ ಅಧಿಕಾರ ತಮಗೆ ಇದೆಯೇ ಹೊರತು ಬೇರೆ ಯಾರಿಗೂ ಇಲ್ಲ. ಶ್ರೀ ಆಜ್ಜಿಬಾಳ್ ಹೆಗಡೆ ಅವರು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು, ಅವಕಾಶ ಮಾಡಿಕೊಡದೇ ಹೋದರೆ ಸದಸ್ಯರ ಹಕ್ಕುಗಳನ್ನು ಮೊಟಕು ಮಾಡಿದಹಾಗೆ ಆಗುತ್ತದೆ. ಆ ಕಡೆಯಿರುವ ಸದಸ್ಯರ ಹಕ್ಕುಗಳನ್ನೇ ಆಗಲಿ, ಈ ಕಡೆಯಿರುವ ಸದಸ್ಯರ ಹಕ್ಕುಗಳನ್ನೇ ಆಗಲೀ ಮೊಟಕುಗೊಳಿಸುವುದಕ್ಕೆ ಅಧಿಕಾರ ಇಲ್ಲ. ಸರಕಾರಕ್ಕೂ ಅಧಿಕಾರವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆ ಕಾರಣದಿಂದ ಆಜ್ಜಿಬಾಳ್ ಹೆಗಡೆ ಅವರು ಈ ಪ್ರಶ್ನೆಯನ್ನು ಕೇಳುವುದರ ಮೂಲಕ ಈ ಸದನದ ಸದಸ್ಯರ ಹಕ್ಕುಗಳನ್ನು, ಈ ಶಾಸನ ಸಭಾ ಸದಸ್ಯರ ಹಕ್ಕುಗಳನ್ನು ಎತ್ತಿ ಹಿಡಿದಂತಾಗುತ್ತದೆ. ಸದಸ್ಯರ ಹಕ್ಕುಗಳಿಗೆ ತಾವು ಸಂಪೂರ್ಣವಾಗಿ ರಕ್ಷಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಮಾಜೀ ನಾಯಕರಾದ ಮೊಯಿಲಿಯವರ ಆಕ್ಷೇಪ ನನಗೆ ಅರ್ಥವಾಗಲಿಲ್ಲ. ನಿಜವಾಗಲೂ ಅರ್ಥವಾಗಲಿಲ್ಲ. ನಾನು ಅರ್ಥ ಮಾಡಿಕೊಂಡ ಮಟ್ಟಿಗೆ ಅವರ ಅಭಿಪ್ರಾಯವೇನೆಂದರೆ ಈ ಪ್ರಶ್ನೆ ಅಫಿಷಿಯಲ್ ಸೀಕ್ರೇಟ್‌ಗೆ ಸಂಬಂಧ ಪಟ್ಟಿಂಥಾದ್ದು, ಚೀಫ್ ಜಸ್ಟೀಸ್ ಅವರು ಏನು ಹೇಳಿದರು ಅದಕ್ಕೆ ನನ್ನ ಅಭಿಪ್ರಾಯ ಏನು ಬಂತು, ಗವರ್ನರ್‌ರವರ ಅಭಿಪ್ರಾಯ ಏನು ಬಂತು. ಇದೆಲ್ಲಾ ಇಲ್ಲಿ ಬರುತ್ತದೆ ಅದಕ್ಕೇ ಈ ಪ್ರಶ್ನೆಯನ್ನು ಇಲ್ಲಿ ಕೇಳಕೂಡದೆಂದು ತಿಳಿದುಕೊಳ್ಳುತ್ತೇನೆ. ಅದು ನಿಜವಿರಬಹುದು. ಈ ಪ್ರಶ್ನೆ ಅದಕ್ಕೆ ಸಂಬಂಧಪಟ್ಟಿಂಥಾದ್ದು ಅಲ್ಲ. ಮಾನ್ಯ ಮೊಯಿಲಿಯವರು ಒಂದು ಪಾತಸನ್ನು ಮಂರೆತಿದ್ದಾರೆ. ಕೇಂದ್ರದ ಲಾ ಮಿನಿಸ್ಟರ್ ಆಫ್ ಸ್ಟೇಟ್ ಅಂಡ್ ಜಸ್ಟೀಸ್, ಅವರು ಏನು ಹೇಳಿಕೆಯನ್ನು ಕೊಟ್ಟರೋ, ಅದು ಲೋಕಸಭೆಯಲ್ಲಿ ಒಬ್ಬ ಸದಸ್ಯರ ಪ್ರಶ್ನೆಗೆ ಉತ್ತರದ ರೂಪವಾಗಿ ಕೊಟ್ಟಿದ್ದಾರೆ. ಲೋಕಸಭೆಯಂ

ರೂಲ್ ಒಂದು. ವಿಧಾನ ಸಭೆಯಂ ರೂಲ್ ಒಂದು ಇಲ್ಲ. ಅಲ್ಲಿ ಯಾರ ಮೇಲೆ ಆಪಾದನೆ ಮಾಡಿದರೋ ಅದಕ್ಕೆ ಉತ್ತರ ಕೊಡಲಿಕ್ಕೆ. ಅವರುಅಲ್ಲಿ ಇದ್ದ ರೇ, ನಮ್ಮ ಪಕ್ಷದ ಸದಸ್ಯರು ಅಥವಾ ಬೇರೆ ಯಾವುದೇ ವಿರೋಧ ಪಕ್ಷದ ಸದಸ್ಯರು ಯಾವ ಪ್ರಶ್ನೆ ಕೇಳಿದರಂ, ಅದಕ್ಕೆ ಉತ್ತರದ ರೂಪವಾಗಿ ಏನು ಹೇಳಿದರಂ ಎನ್ನುವುದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರಂ.—ನೀವು ಹೋಗಿ ಅಲ್ಲೆಯೇ ಕೇಳಬೇಕಿತ್ತು.

(ಗೊಂದಲ)

ಅಧ್ಯಕ್ಷರು.—ತಾವು ಕಂಳಿತಂಕೊಳ್ಳಿ. ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ವೀರಪ್ಪಮೊಯಿಲಿಯವರ ಮಾತನ್ನು ಕೇಳಿದ್ದೇನೆ. ಅವರೂ ಕೇಳಿದ್ದಾರೆ.

ಶ್ರೀ ರಾಮಂಕೃಷ್ಣ ಹೆಗಡೆ.—ಯಾವ ರೀತಿ ಪಾರ್ಲಿಮೆಂಟ್‌ನ ಒಂದು ಪರಿಮಿತಿಯೊಳಗೆ, ಸಾರ್ವಭೌಮತ್ವದೊಳಗೆ ಅಧಿಕಾರವನ್ನು ಹೊಂದಿದೆಯೋ ಅದೇ ರೀತಿಯ ಒಂದು ಪರಿಮಿತಿಯೊಳಗೆ ಈ ವಿಧಾನ ಸಭೆಗೆ ಕೂಡ ಅಷ್ಟೇ ಸಾರ್ವಭೌಮತ್ವ ಇದೆ. ಇದಂ ಪಾರ್ಲಿಮೆಂಟಿನ ಒಂದು ಕೆಳಗಡೆ ಇರತಕ್ಕಂತಹ ಸಂಸ್ಥೆ ಅಲ್ಲ, ಅದನ್ನು ಅವರಂ ತಿಳಿದುಕೊಳ್ಳಬೇಕು.

(ಒಮ್ಮೆಲೆ ಎರಡೂ ಕಡೆಯಂ ಸದಸ್ಯರಂಗಳು ಒಟ್ಟಿಗೆ ಎದ್ದು ನಿಂತುಂ ಮಾತನಾಡತೊಡಗಿದರಂ)

ಅಧ್ಯಕ್ಷರು.—ಮಾನ್ಯ ವೀರಪ್ಪಮೊಯಿಲಿಯವರಂ ಹೇಳಿದ್ದನ್ನು ಕೇಳಿದ್ದೇನೆ, ಸಭಾನಾಯಕರಂ ಏನಂ ಹೇಳುತ್ತಾರೋ ಅದನ್ನು ಕೇಳಬೇಕಾಗುತ್ತದೆ. ನಂತರ ರೂಲಿಂಗ್ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ರಾಮಂಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ,...

ಶ್ರೀ ಎಸ್. ಬಂಗಾರಪ್ಪ.—ಈ ಹೌಸ್ ಕೂಡ ಸಂಪ್ರೀಂ.....

(ಗೊಂದಲ)

ಅಧ್ಯಕ್ಷರಂ.—ಅವರು ಹೇಳಂವುದು ಮಂಗಿಯಲಿ.

ಶ್ರೀ ರಾಮಂಕೃಷ್ಣ ಹೆಗಡೆ.—ಸಂಸದೀಯ ವ್ಯವಹಾರದಲ್ಲಿ ಪ್ರಶ್ನೋತ್ತರಕ್ಕೆ ಒಂದು ವಿಶೇಷ ಪಾದಂತಹ ಸ್ಥಾನ ಇದೆ. ಮಾನ್ಯ ಸದಸ್ಯರಿಗೆ ಪ್ರಶ್ನೆ ಕೇಳತಕ್ಕಂತಹ ಹಕ್ಕು ಇದೆ. ಪ್ರಶ್ನೆಯನ್ನು ಏತಕ್ಕೆ ಕೇಳುತ್ತಾರೆಂದರೆ ಸಾರ್ವಜನಿಕರ ಮನಸ್ಸಿನಲ್ಲಿ ಯಾವುದೇ ಒಂದು ವಿಚಾರದ ಬಗ್ಗೆ ಸಂದೇಹವಿದ್ದರೆ ಅಥವಾ ಸತ್ಯಸಂಧತೆಯನ್ನು ತಿಳಿದುಕೊಳ್ಳಬೇಕೆಂಬ ಅಭಿಪ್ರಾಯವಿದ್ದರೆ, ಅವರ ಪ್ರತಿನಿಧಿಯಾಗಿ ಕೆಲಸ ಮಾಡತಕ್ಕಂತಹ ಮಾನ್ಯ ಸದಸ್ಯರು ಆದಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಯನ್ನು ಕೇಳುತ್ತಾರೆ. ಪ್ರಶ್ನೆಯನ್ನು ಕೇಳುವುದು ಕೇವಲ ಫ್ಯಾಕ್ಟ್‌ನ್ನ ತಿಳಿದುಕೊಳ್ಳುವುದಕ್ಕೆ. ಇಲ್ಲಿಯ ನೀತಿಯ ವಿಚಾರವಾಗಲೀ, ಬೇರೆ ಯಾವುದೇ ವಿಚಾರವಾಗಲೀ ಇಲ್ಲಿ ಬರುವುದಿಲ್ಲ. ತಾವು ದಯವಿಟ್ಟು ಸಂಬಂಧಪಟ್ಟಂತಹ ನಡವಳಿಕೆಗಳನ್ನು, ರೂಲ್ಸ್‌ಗಳನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಲ್ಲಿ ಒಂದು ವಿಚಾರದ ಬಗ್ಗೆ ಪ್ರಶ್ನೆ ಇದೆ. ಇಲ್ಲಿಂದ ಯಾವ ಹೆಸರಂಗಳಂ ಶಿಫಾರಸ್ಸುಗಳಾಗಿ ಹೋದವೋ, ಅದರಲ್ಲಿ ಮಂತ್ರಿಗಳ, ಮುಂಖ್ಯ ಮಂತ್ರಿಗಳ ಸಂಬಂಧಿಕರಿದ್ದಾರೆಯೇ ಎಂದು ಸಾರ್ವಜನಿಕರ ಮನಸ್ಸಿನಲ್ಲಿ, ಈ ವಿಚಾರ ಬಂದಾಗ ಪಾರ್ಲಿಮೆಂಟಿನಲ್ಲಿ ಇದು ಬಂದಾಗ, ಈ ಬಗ್ಗೆ ಸತ್ಯಾಂಶಗಳನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಈ ಪ್ರಶ್ನೆಯನ್ನು ಕಳಿಸಿದ್ದಾರೆಯೇ ಹೊರತು ಬೇರೆ ಯಾರನ್ನಾದರೂ, ಅವರ ಹೆಸರನ್ನು ನಿಂದನೆ ಮಾಡಬೇಕು, ಅವರು ಅಲ್ಲಿ ಏನಂ ಹೇಳಿದರಂ, ಅದಕ್ಕೆ ಪ್ರತಿ ರೂಪವಾಗಿ ಹೇಳಬೇಕೆಂಬ ಉದ್ದೇಶದಿಂದ ಅಲ್ಲ. ಸತ್ಯಸಂಧತೆಯನ್ನು ತಿಳಿದುಕೊಳ್ಳುವ ಅಗತ್ಯದಿಂದ ಎಂಬ ದೃಷ್ಟಿಯಿಂದ ಈ ಪ್ರಶ್ನೆಯನ್ನು ಕೇಳಿದ್ದಾರೆ. ಪ್ರಶ್ನೆಯನ್ನು ಒಪ್ಪುವುದೂ ಬಿಡುವುದೂ ತಮಗೆ ಸೇರಿದ್ದು. ಯಾವುದೇ ಒಂದು ಪ್ರಶ್ನೆ ರೂಲ್ಸ್‌ಗನಂಗುಣವಾಗಿ ಇಲ್ಲದಿದ್ದರೆ ಆಗ ಮಾನ್ಯ ಸಭಾಧ್ಯಕ್ಷರು ಅದನ್ನು ತಿರಸ್ಕಾರ ಮಾಡುತ್ತಾರೆ ಅಥವಾ ಅಮೆಂಡ್ ಮಾಡತಕ್ಕಂತಹ ಅಧಿಕಾರ ಅವರಿಗೆ ಇದೆ. ತಾವು ತಮ್ಮ ವಿವೇಚನಾಶಕ್ತಿಗನುಸಾರವಾಗಿ ಈ ಪ್ರಶ್ನೆ ರೂಲ್ಸ್‌ಗೆ

ವಿರುದ್ಧವಲ್ಲವೆಂದು ಆಡ್ಮಿಟ್ ಮಾಡಿದ್ದೀರಿ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರಿಗೆ ಈ ಪ್ರಶ್ನೆಯನ್ನು ಹಾಕತಕ್ಕಂತಹ ಅನುಮತಿಯನ್ನು ಕೊಡಬೇಕು. ಮಾನ್ಯ ಮೊಯಿಲಿಯವರು ಎತ್ತಿದಂತಹ ಅಕ್ಷೇಪಕ್ಕೆ ಯಾವುದೇ ತರಹದ ತಳಹದಿ ಇಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು.

(ಗೊಂದಲ)

ಅಧ್ಯಕ್ಷರು.— ತಾವೆಲ್ಲರೂ ದಯವಮಾಡಿ ಕುಳಿತುಕೊಳ್ಳಬೇಕು. ಇದರ ಮೇಲೆ ವ್ಯಾಖ್ಯಾನ ಬೇಡ ದಯವಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಮಾನ್ಯ ವೀರಪ್ಪಮೊಯ್ಲಿಯವರು ಇದುವರೆಗೂ ಹೇಳಿದ್ದಾರೆ. ಅದೇ ಪ್ರಕಾರ ಇವರೂ ಹೇಳಿದ್ದಾರೆ. ನಾನು ರೂಲಿಂಗ್ ಕೊಡುತ್ತೇನೆ. ದಯವಮಾಡಿ ಕುಳಿತುಕೊಳ್ಳಬೇಕು. ಸದಸ್ಯರ ಹಕ್ಕಿಗೆ ಚ್ಯುತಿ ಬರಬಾರದೆಂದು ನೀವು, ಅದೇ ಪ್ರಕಾರ ಇವರು ಹೇಳಿದ್ದಾರೆ. ನಾನು ರೂಲಿಂಗ್ ಕೊಡುತ್ತೇನೆ ದಯವಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ನಾನು ರೂಲಿಂಗ್ ಕೊಡುತ್ತೇನೆ, ದಯವಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಯಾರು ಏನೇ ಮಾತನಾಡಿದರೂ ಈಗ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ದಯವಮಾಡಿ ಕುಳಿತುಕೊಳ್ಳಬೇಕು. ಈ ಕಡೆಯವರು ಹೇಳಿದ್ದುದು ಆ ಕಡೆಯವರು ಹೇಳಿದ್ದುದು ಎರಡನ್ನೂ ಕೇಳಿದ್ದೇನೆ. ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಆ ಕಡೆ ಸದಸ್ಯರು ಈ ಕಡೆ ಸದಸ್ಯರುಯಾರು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ರೂಲಿಂಗ್ ಕೊಡುತ್ತೇನೆ, ದಯವಮಾಡಿ ಕುಳಿತುಕೊಳ್ಳಬೇಕು.

ಗೊಂದಲ

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೆ,...

ಅಧ್ಯಕ್ಷರು.— ಈಗ ಬೇಡ, ದಯವಮಾಡಿ ಕುಳಿತುಕೊಳ್ಳಬೇಕು. ನಾನು ರೂಲಿಂಗ್ ಕೊಡುತ್ತೇನೆ. ಮಾನ್ಯ ಬಂಗಾರಪ್ಪನವರೇ ನಾನು ರೂಲ್ಸ್ ಪ್ರಕಾರ ಹೇಳುತ್ತಿದ್ದೇನೆ. ಈಗ ನೀವು ಮಾತನಾಡಿದರೆ, ಅವರೂ ಮಾತನಾಡುತ್ತಾರೆ.

(ಗೊಂದಲ)

ಈಗ ಯಾರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಅವರು ಮಾತನಾಡುವುದು ಹೋಗುವುದಿಲ್ಲ ಇವರು ಮಾತನಾಡುವುದು ಹೋಗುವುದಿಲ್ಲ. ಈಗ ಯಾರೂ ಮಾತನಾಡುವುದು ಬೇಡ.ಎಲ್ಲರೂದಯವಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ನೀವು ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಈಗ ರೂಲಿಂಗ್ ಕೊಡುತ್ತೇನೆ, ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನು ರೂಲಿಂಗ್ ಕೊಡುತ್ತೇನೆ. ದಯವಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ನಾನು ಈಗ ಕೊಶ್ಚನ್ ಅಲೋ ಮಾಡಿದ್ದೇನೆ.

(ಗೊಂದಲ)

ನಾನು ಕೊಶ್ಚನ್ ಅಲೋ ಮಾಡಿದ್ದೇನೆ. ಮಾನ್ಯ ಮಂತ್ರಿಗಳು ಉತ್ತರ ಹೇಳಲಿ, ರೂಲಿಂಗ್ ಕೊಟ್ಟಿದ್ದೇನೆ. ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಯಾರು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಈ ರೀತಿ ಹರಿದು ಹಾಕುವುದು ಸರಿಯಲ್ಲ.

(ಗೊಂದಲ)

ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಸ್ವಲ್ಪ ದಯವಮಾಡಿ ಎಲ್ಲರೂ ಸುಮ್ಮನೆ ಇರಬೇಕು. ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಯಾರು ಏನು ಮಾತನಾಡಿದರೂ ಅದು ರೆಕಾರ್ಡಾಗೆ ಹೋಗುವುದಿಲ್ಲ.

(ಗೊಂದಲ)

ನಾನು ರೂಲಿಂಗ್ ಕೊಟ್ಟಿದ್ದೇನೆ. ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

MR. SPEAKER.— Please hear me.

" Rulings by the speaker: It is the right of the Speaker to interpret the Constitution and rules so far as it matters in or relating to the House are concerned and no one including the Government can enter into any argument or controversy with the Speaker over such interpretation. His ruling constitute precedents by which subsequent Speakers Members and officers are guided. Such precedents are collected and in course of time formulated as rules of procedure or followed as conventions. The Speaker's ruling as already stated cannot be questioned except on a substantive motion. The member who protests against the ruling of the Speaker commits contempt of the House and the Speaker. The Speaker's decision is equally binding whether given in the House or on a departmental file. He is not bound to give reasons. for his decision. Members cannot criticise directly or indirectly inside or out side the House any

ruling given, opinion expressed or statement made by the Speaker. If a member desires to make a submission to the Speaker, the Speaker, may permit a member on the floor of the House regarding a ruling, the Speaker may permit the member to do so after satisfying himself that it does not unduly interfere with the proceedings of the House. The member making such a submission cannot criticise the decision but can seek elucidation on any point or request the Chair to consider the rullig in the light of the facts submitted by him.

Observations made by the Speaker in the House cannot be interpreted in private correspondence."

ತಾವು ಆ ರೀತಿ ವರ್ತಿಸಿದರೆ ಕಂಟೆಂಪ್ಟ್ ಆಫ್ ದಿ ಹೌಸ್ ಆಗಂತ್ತದೆ. ನಾನು ಪ್ರಶ್ನೆ ಕೇಳುವುದಕ್ಕೆ ಅಲೋ ಮಾಡಿದ್ದೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಜೆ. ಎಂ. ಕಾನಡೆ.— ತಾವು ಮನಸ್ಸಿಗೆ ಬಂದ ಹಾಗೆ ರೂಲಿಂಗ್ ಕೊಡುವುದಕ್ಕಾಗುವುದಿಲ್ಲ.

MR. SPEAKER.— If you are dissatisfied with me, there is another way. I have allowed, I have given ruling. There is no further question.

(Interruption)

MR. SPEAKER.—Nothing will go on record.

(Interruption)

MR. SPEAKER.— It is the ruling given by your representative. ರೂಲಿಂಗ್ ಕೊಟ್ಟ ಮೇಲೆ ಮತ್ತೆ ತಾವು ಏತಕ್ಕೆ ಮಾತನಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ.— ನಾವು ಮನವಿ ಮಾಡಿಕೊಳ್ಳುವುದು ಏನೆಂದರೆ ತಾವು ರೂಲಿಂಗ್ ಕೊಟ್ಟಿದ್ದೀರಿ. ನಿಯಮ ೪೬ ರ ಪ್ರಕಾರ ರೂಲಿಂಗ್‌ನ್ನು ರಿವೈಸರಿ ಮಾಡಬೇಕೆಂದು ತಮ್ಮ ಮನವೊಲಿಸತಕ್ಕ ದೃಷ್ಟಿಯಿಂದ ನಿಂತಿದ್ದೇವೆ. ತಾವು ರೂಲಿಂಗ್ ಕೊಟ್ಟಿದ್ದುದು ತಪ್ಪು ಎಂದು ನಾವು ಹೇಳುತ್ತಿಲ್ಲ.

ಅಧ್ಯಕ್ಷರು.— ರೂಲ್ಸ್‌ನ್ನು ತಾವು ಮನ್ನಣೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿ, ೧೦೦ ಸಲ ೧೦೦೦ ಸಲ ಮುಂದಕ್ಕೆ ಹಾಕಿರುವುದು ಇದೆ.

MR. SPEAKER.— You please obey this ruling. ruling is ruling,

ಶ್ರೀ ಎಂ. ಎಸ್. ಕೃಷ್ಣನ್.— ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಮಾನ್ಯ ಮಂತ್ರಿಗಳು ಗಹನವಾದ ವಿಷಯವನ್ನು ಹೇಳಿದ್ದಾರೆ.

MR. SPEAKER.— I have heard both.

ಶ್ರೀ ಎಂ. ಎಸ್. ಕೃಷ್ಣನ್.— ನಿಯಮ ೪೬ (ಎಲ್) ಮತ್ತು (ಆರ್) ರ ಪ್ರಕಾರ ಹೀಗೆ ಇದೆ. ಕೌಲ್ ಅಂಡ್ ಶಕ್ಧಾರ್‌ರವರು ಈ ರೀತಿ ವ್ಯಾಖ್ಯಾನ ಮಾಡಿದ್ದಾರೆ.

"(1) it shall hot make or imply a charge ef a personal character.

(r) it shall not raise matters under the control of bodies or persons not primarily responsible to the State Government"

ಪರ್ಸನಲ್ ಚಾರ್ಜ್ ಮಾಡಕೂಡದು ಎನ್ನುವ ಅಭಿಪ್ರಾಯ ಇದೆ. ಇಲ್ಲಿ ಪರ್ಸನಲ್ ಚಾರ್ಜ್ ಆಗಿದೆಯೇ ಎನ್ನುವುದು ಮೊದಲನೆಯ ಪ್ರಶ್ನೆ. ಈ ವಿಷಯ ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಎಲ್ಲಾ ಕಡೆ ಚರ್ಚೆ ಕೂಡ ಆಗಿದೆ. ಒಬ್ಬರನ್ನು ಅವಹೇಳನ ಮಾಡಿದರೆ ಪರ್ಸನಲ್ ಚಾರ್ಜ್ ಆಗುತ್ತದೆಯೇ?

What Kaul and Shakdher says is.—

"A member is at liberty to criticise the action of the Government but when it comes to allegations of defamatory character of an individual, the freedom of speech does not extent to make a defamatory statement against any peresons. The question containing personal insinuation seeking either to support or bring in disrepute of an individual or officer of the Government or a person, are inadmissible as it is not in the public interest..."

The point is that whether it is personal insinuation. or whether it tries to bring in disrepute of an officer of the Government. This is the position. It does not seem to be a question of insinuations against a person. An incident has taken place. Some questions have been asked and some debate has taken place in the country There does not seem to be any difficulty in discussing this matter. What I am only trying to bring home to you is that you should very much please if you can reconsider the whole thing. But I don't question you ruling.

ಅಧ್ಯಕ್ಷರು.— ಇಲ್ಲಿ ಆ ರೀತಿ ಇಲ್ಲವಲ್ಲ.

ಎಂ. ಎಸ್. ಕೃಷ್ಣನ್.— ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡುವುದು ಸೂಕ್ತ. Shirking out a question may not be very happy.

ಅಧ್ಯಕ್ಷರು.— ಈಗ ನಾನು ಆಗಲೇ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.— ನೀವು ಸ್ವಲ್ಪ ಕುಳಿತುಕೊಳ್ಳಿ.

SRI M. VEERAPPA MOILY.— There are certain alligations made by certain persons. Is he going to deny it?

There are district judges, if you go on making allegations or otherwise, is it not a personal charge? Suppose you call them communalists. Do they belong to that community or caste? ಚರ್ಚೆ ಶುರುವಾದ ಮೇಲೆ ಯಾರ್ಯಾರನ್ನು ರೆಕಮೆಂಡ್ ಮಾಡಿದ್ದಾರೆ ಎಂಬುದೂ ಬರುತ್ತದೆ. ಅದರ ಹಿನ್ನೆಲೆಯನ್ನೆಲ್ಲ ಚರ್ಚಿಸಲು ನೀವು ಅಲೋ ಮಾಡುತ್ತೀರಾ?

(ಗೊಂದಲ)

ಅಧ್ಯಕ್ಷರು.—ಅಲೋ ಮಾಡುವುದು ಬಿಡುವುದೂ ನನಗೆ ಬಿಟ್ಟಿದ್ದಾದು.

ಶ್ರೀ ಎಂ. ವೀರಪ್ಪ ಮೊಯಿಲಿ.— ತಮ್ಮ ಹಕ್ಕಿನ ಪ್ರಶ್ನೆಯಲ್ಲ ಅಧ್ಯಕ್ಷರೇ. ಮಂಡಿಸಿದ ಸಚ್ಚಿಮೆಂಟರಿ ಕ್ವೆಶ್ಚನ್‌ಗಳಲ್ಲಿ ಬೇರೆಯವರ ಮೇಲೆ ಆಪಾದನೆ ಮಾಡಲು ಅವಕಾಶವಾಗುತ್ತದೆ.

MR. SPEAKER.—Supplementary, I may allow or may not allow.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ ಇವರು ಉದ್ದಟತನ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಬೇಕಾದರೆ ಇದನ್ನು ಮಂತ್ರಿ ಓದುತ್ತೇನೆ. ಇಲ್ಲಿ ಆಪಾದನೆ ನೇರವಾಗಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಅಜ್ಜೀಬಾಳ್ ಹೆಗಡೆಯವರನ್ನು ಪ್ರಶ್ನೆ ಕೇಳಲು ಕರೆದಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಈಗ ಎರಡೂ ಕಡೆಯವರು ಕುಳಿತುಕೊಳ್ಳಿ. ಅವರು ಹೇಳುವುದೂ ಬೇಡ, ನೀವೂ ಕೇಳುವುದೂ ಬೇಡ.

(ಗೊಂದಲ)

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ಕ್ವೆಶ್ಚನ್ ಹವರ್ ಮುಗಿದಿದೆ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಅಜ್ಜೀಬಾಳ್ ಹೆಗಡೆ.—ಅಧ್ಯಕ್ಷರೇ, ನನ್ನ ಪ್ರಶ್ನೆ ಏನಾಯಿತು. ಇದು ಮಂಖ್ಯವಾದದ್ದು. ಆದ್ದರಿಂದ ನಾನು ಪ್ರಶ್ನೆ ಕೇಳುತ್ತೇನೆ. ಸರ್ಕಾರ ಉತ್ತರಿಸಲಿ.

(ಗೊಂದಲ)

(ವಿರೋಧ ಪಕ್ಷದವರು ಎದ್ದು ನಿಂತು ನ್ಯಾಯ ಬೇಕೆ ಬೇಕು ಎಂದು ಘೋಷಣೆ ಕೂಗಿದರು)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಪ್ರತಿಯೊಂದನ್ನೂ ರೆಕಾರ್ಡ್ ದೃಷ್ಟಿಯಿಂದ ತಾವು ನೋಡಿದರೆ ಹೇಗೆ ?

ಅಧ್ಯಕ್ಷರು.—ಆ ತರಹ ಮಾತಾಡಬಾರದು. Nothing will go on record. ನಾನು ಅವರಿಗೆ ಅಲೋ ಮಾಡಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಾನು ಆಗಲೇ ರೂಲಿಂಗ್ ಕೊಟ್ಟಿದ್ದೇನೆ. ಈ ರೀತಿ ಕಾರ್ಯಕಲಾಪಕ್ಕೆ ಅಡಚಣೆ ಮಾಡುವುದು ಸರಿಯಲ್ಲ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮೊಯಿಲಿಯವರೇ ನೀವಾದರೂ ನಿಮ್ಮ ಕಡೆಯವರಿಗೆ ಹೇಳಿ. ಈ ತರಹ ಮಾಡುವುದು ಸರಿಯಲ್ಲ. ನಾನು ಅಜ್ಜೀಬಾಳ್ ಹೆಗಡೆ ಅವರನ್ನು ಪ್ರಶ್ನಿಸಲು ಕರೆದಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ. ಯಾರೂ ಮಧ್ಯೆ ಮಾತಾಡುವುದು ಬೇಡ.

ಅಧ್ಯಕ್ಷರು.—ಈಗಾಗಲೇ ಕೋಳಿವಾಡ ಅವರ ಪ್ರಶ್ನೆ ಹೇಗೆ ಆಗಿದೆ, ಹಾಗೆಯೇ ಮಂನೋರಮಾ ಮಧ್ವರಾಜ್ ಅವರ ಪ್ರಶ್ನೆಯೂ ಆಗಿದೆ. ಬೇರೆ ಸಪ್ಲಿಮೆಂಟರಿಗೆ ಅವಕಾಶವಿಲ್ಲ.

ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಥಮ ದರ್ಜೆಯ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದು

೩೭೬. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಹೊನ್ನಾಳಿ ತಾಲ್ಲೂಕು ಕೊಲಂಬಿ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕವನು ಮೇಲ್ದರ್ಜೆಯ ಆಸ್ಪತ್ರೆಯನ್ನಾಗಿ ಪರಿವರ್ತಿಸಿಕೊಡಲು ಗ್ರಾಮಸ್ಥರ ಕೋರಿಕೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ವರ್ಷವಾದರೂ ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗುವುದೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು).—

(ಅ) ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಮನವಿ ಬಂದಿದೆ.

(ಆ) ಇದನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ. ಈ ತರಹ ಮಾಡುವುದು ಸರಿಯಲ್ಲ.

SRI M. MALLIKARJUNA KHARGE.—You have yielded to the pressure. With all humility I am telling, you have yielded to the pressure.

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

SRI M. VEERAPPA MOILY.—I am very sorry. This House has been utilised to satisfy the ego of the Chief Minister...

(ಗೊಂದಲ)

SRI RAMAKRISHNA HEGDE.—This amounts to the contempt of this House.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವೇ ಪ್ರಶ್ನೆ ಹಾಕಿಕೊಂಡು ನೀವೇ ಉತ್ತರ ಕೊಟ್ಟುಕೊಳ್ಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ತಾವುಗಳು ಈ ತರಹ ಮಾಡುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಈ ತರಹ ಮಾಡುವುದು ಸರಿಯೆ ?

ಅಧ್ಯಕ್ಷರು.—ನೀವು ಈ ತರಹ ಮಾಡಿದರೆ I have to take action.

ಶ್ರೀ ರಾಮಕೃಷ್ಣ ಹೆಗಡೆ.—ಸತ್ಯವನ್ನು ತಿಳಿದುಕೊಳ್ಳಿ, ಅದಕ್ಕೆ ವಿತಕ್ಕೆ ಗಲಾಟೆ ಮಾಡುತ್ತೀರಿ ?

(ಗೊಂದಲ)

MR. SPEAKER.—Question Hour is over.